ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.

**CC No.115/2019**

**PW-5 CW-11**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಡಾ. ಆರ್. ಎಸ್. ಹುಲಿಮನಿ ಗೌಡರ |
| ವಯಸ್ಸು | ಃ | 55 ವರ್ಷ |
| ಉದ್ಯೋಗ | ಃ | ಹಿರಿಯ ವೈದ್ಯಾಧಿಕಾರಿಗಳು |
| ವಾಸಸ್ಥಳ | ಃ | ಜಾಲಹಳ್ಳಿ |
| ಪ್ರಮಾಣೀಕರಿಸಿದ ದಿನಾಂಕ | ಃ | **24**-12-2024 |

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ನಾನು 2003 ರಿಂದ ಇಲ್ಲಿಯ ವರೆಗೂ ಜಾಲಹಳ್ಳಿ ಸರಕಾರಿ ಆಸ್ಪತ್ರೆಯಲ್ಲಿ ಆಡಳಿತ ವೈದ್ಯಾಧಿಕಾರಿಗಳು ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ **26-04-2019** ರಂದು ಸಂಜೆ **4-00** ಗಂಟೆ ಸುಮಾರಿಗೆ ಗಾಯಾಳು ಚಂದ್ರಶೇಖರ ಇವರನ್ನು ಪೊಲೀಸ ಮುಖ್ಯ ಪೇದೆ **79** ರವರು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು , ಸದರಿ ಅವರನ್ನು ಪರೀಕ್ಷಿಸಲಾಗಿ ದಿ. **25-04-2019** ರಂದು ಸಂಜೆ **5-00** ಗಂಟೆಗೆ ಆದ ಹೊಡೆದಾಟದಲ್ಲಿ ಗಾಯಗಳಾಗಿರುವುದಾಗಿ ತಿಳಿಸಿದ್ದು , ಸದರಿ ಗಾಯಗಳು ಈ ಕೆಳಕಂಡ ಇರುತ್ತವೆ.

**1)** ಹಣೆಯ ಮೇಲೆ ನೋವಿನಿಂದ ಕೂಡಿದ ಗಾಯ.

**2)** ಎಡ ಹೆಬ್ಬೆರಳಿನ ಮೇಲೆ ತೆರೆಚಿದ ಗಾಯವಾಗಿರುತ್ತದೆ.

ಸದರಿ ಗಾಯಗಳು ನನ್ನ ಅಭಿಪ್ರಾಯದಲ್ಲಿ ಸಾದಾ ಸ್ವರೂಪದ ಗಾಯಗಳಾಗಿರುತ್ತವೆ ಅವುಗಳಿಗೆ ಚಿಕಿತ್ಸೆ ನೀಡಿದ್ದೇನೆ. ಆ ಕುರಿತು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಅದನ್ನು ನಿಪಿ-**3** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**3(**ಎ**)** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀಹೆಚ್ ಕೆ ವಕೀಲರಿಂದ.

ದಿನಾಂಕ **26-04-2019** ರಂದು ಸಂಜೆ **4-00** ಗಂಟೆ ಸುಮಾರಿಗೆ ಗಾಯಾಳು ಬಂದಿದ್ದರು. ನಿಪಿ-**3** ರಲ್ಲಿ ನಮೂದಿಸಿರುವ ಗಾಯಗಳು ದ್ವಿಚಕ್ರ ವಾಹನದ ಮೇಲಿಂದ ಬಿದ್ದಾಗ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ನಿಪಿ-**3** ನ್ನು ಸೃಷ್ಟಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳುನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.